ನಿಮ್ಮೊಡನೆ

# ಸಹಕಲಾವಿದರೆಂದರೆ ಏಕೀ ನಿರ್ಲಕ್ಷ್ಯ?

> ಸಿನಿಮಾದಲ್ಲಿ ಕಲಾವಿದರನ್ನು ಎರಡು ರೀತಿಯಲ್ಲಿ ನೋಡಿಕೊಳ್ಳಲಾಗುತ್ತಿದೆ. ನಾಯಕ– ನಾಯಕಿಯರಿಗೊಂದು ಬಗೆ, ಸಹನಟ– ನಟಿಯರಿಗೆ ಇನ್ನೊಂದು ಬಗೆ ಎಂಬ ಆರೋಪಗಳು ಲಾಗಾಯ್ತಿನಿಂದಲೂ ಇವೆ. ನಾಯಕ– ನಾಯಕಿಯರ ಸುರಕ್ಷತೆಗೆ ತೆಗೆದುಕೊಳ್ಳುವ ಕಾಳಜಿ, ಸವಲತ್ತುಗಳು ಸ್ಟಂಟ್ ಕಲಾವಿದರು ಸೇರಿದಂತೆ ಉಳಿದವರಿಗೆ ಇಲ್ಲ.

ರಾಮನಗರ ಜಿಲ್ಲೆಯ ತಿಪ್ಪಗೊಂಡನಹಳ್ಳಿ ಜಲಾಶಯದ ಹಿನ್ನೀರಿನಲ್ಲಿ ನಡೆಯುತ್ತಿದ್ದ ದುನಿಯಾ ವಿಜಯ್ ಅಭಿನಯದ 'ಮಾಸ್ತಿಗುಡಿ' ಚಲನಚಿತ್ರದ ಕ್ಲೈಮ್ಯಾಕ್ಸ್ ಚಿತ್ರೀಕರಣದ ಸಂದರ್ಭದಲ್ಲಿ ಇಬ್ಬರು ಸ್ಟಂಟ್ ಕಲಾವಿದರು ದುರ್ಮರಣ ಹೊಂದಿರುವ ಘಟನೆ ಈಗ ವ್ಯಾಪಕ ಚರ್ಚೆಯನ್ನು ಹುಟ್ಟು ಹಾಕಿದೆ. ಸಿನಿಮಾ ರಂಗದಲ್ಲಿ ನಾಯಕ– ನಾಯಕಿಯರ ಹೊರತಾಗಿ ಇತರ ಸಹನಟರು– ನಟಿಯರ, ಕಾರ್ಮಿಕರ ರಕ್ಷಣೆ ಬಗ್ಗೆ ನಿರ್ಲಕ್ಷ್ಯ ಧೋರಣೆ ತಾಳಲಾಗುತ್ತಿದೆ ಎಂದು ಹಿಂದಿನಿಂದಲೂ ಇರುವ ಆರೋಪಗಳ ಕೂಗು ಇನ್ನಷ್ಟು ಬಲವಾಗುತ್ತಿದೆ.

ದುರಂತದಲ್ಲಿ ಇಬ್ಬರು ಸ್ಟಂಟ್ ಕಲಾವಿದರಾದ ಅನಿಲ್ ಹಾಗೂ ಉದಯ್ ರಾಘವ ಅವರ ಬದುಕು ಅಂತ್ಯಗೊಂಡಿದ್ದು ಆಕಸ್ಮಿಕ ಘಟನೆಯೇನೂ ಅಲ್ಲ. 70 ಅಡಿ ಆಳವಿರುವ ಜಲಾಶಯಕ್ಕೆ 60 ಅಡಿ ಎತ್ತರದಿಂದ ಹೆಲಿಕಾಪ್ಟರ್‌ನಿಂದ ಧುಮುಕುವಾಗ ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ವಹಿಸದೇ ಇರುವುದು ಸಾಹಸ ನಿರ್ದೇಶಕ ಸೇರಿದಂತೆ ಇಡೀ ಚಿತ್ರತಂಡದ ಬೇಜವಾಬ್ದಾರಿತನ ಎಂದೇ ವಿಶ್ಲೇಷಿಸಲಾಗುತ್ತಿದೆ. ಇಂತಹ ಅಪಾಯಕಾರಿ ಸನ್ನಿವೇಶಗಳನ್ನು ಚಿತ್ರೀಕರಿಸಲು ಹೊರಟಿದ್ದು, ಈಜು ಬಾರದ ಕಲಾವಿದರು ಒತ್ತಡದಿಂದಲೋ ಅಥವಾ ಸಿನಿಮಾ ರಂಗದಲ್ಲಿ ಮುಂದುವರಿಯಬೇಕು ಎನ್ನುವ ಆಸೆಯಿದ್ದರೆ ಎಲ್ಲದಕ್ಕೂ ಸಿದ್ಧರಿರಬೇಕು ಎನ್ನುವ ಧೋರಣೆಯಿಂದಲೋ ಲೈಫ್ ಜಾಕೆಟ್ ಧರಿಸದೇ ಜಿಗಿದಿದ್ದು, ನೀರಿಗೆ ಬಿದ್ದ ನಂತರ ಅವರ ರಕ್ಷಣೆಗಾಗಿ ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ವ್ಯವಸ್ಥೆ ಮಾಡಿಕೊಳ್ಳದೇ ಇದ್ದಿದ್ದು ನಿರ್ಲಕ್ಷ್ಯದ ಪರಮಾವಧಿ ಎನ್ನಬಹುದು.

ಈ ರೀತಿ ಕಲಾವಿದರ ಜೀವದ ಜೊತೆ ಚೆಲ್ಲಾಟವಾಡಿದ ಪ್ರಕರಣಗಳು ಈ ಹಿಂದೆಯೂ ಚಿತ್ರರಂಗದಲ್ಲಿ ಸಾಕಷ್ಟು ನಡೆದಿವೆ. 1995ರಲ್ಲಿ ತೆರೆ ಕಂಡ ದೇವರಾಜ್ ನಟನೆಯ 'ಲಾಕಪ್ ಡೆತ್' ಚಿತ್ರೀಕರಣದ ಸಂದರ್ಭದಲ್ಲಿ ಬೆಂಗಳೂರಿನ ಎಂ.ಜಿ.ರಸ್ತೆಯಲ್ಲಿ ಬೈಕ್ ಸ್ಟಂಟ್ ಮಾಡುವಾಗ ಅವಗಢ ಸಂಭವಿಸಿ ಇಬ್ಬರು ಸ್ಟಂಟ್ ಕಲಾವಿದರು ಭೀಕರ ಪೆಟ್ಟು ತಿಂದಿದ್ದರು. ಬಾಲಿವುಡ್‌ನಲ್ಲಿ 'ಕೂಲಿ' ಸಿನಿಮಾದ ಚಿತ್ರೀಕರಣ ನಡೆಯುತ್ತಿದ್ದಾಗ ನಟ ಅಮಿತಾಭ್ ಬಚ್ಚನ್ ಹಾಗೂ ಖಳನಟನ ನಡುವಿನ ಹೊಡೆದಾಟದ ವೇಳೆ ಬಚ್ಚನ್‌ಗೆ ಏಟು ಬಿದ್ದು ಈಗಲೂ ಯಕೃತ್ತಿನ ಸಮಸ್ಯೆಯಿಂದ ಬಳಲುತ್ತಿದ್ದಾರೆ.

ಬೆಳ್ಳಿತೆರೆಯ ಮೇಲೆ ಇಂತಹ ಸಾಹಸ ದೃಶ್ಯಗಳು ಪ್ರೇಕ್ಷಕರನ್ನು ಸೆಳೆಯುತ್ತವೆ ನಿಜ. ಆದರೆ ಇಂತಹ ಸಾಹಸ ದೃಶ್ಯಗಳನ್ನು ಮೂಡಿಸುವುದಕ್ಕಾಗಿ ತೆರೆಯ ಹಿಂದೆ ಸಾಕಷ್ಟು ಕಷ್ಟಪಡಬೇಕಾಗುತ್ತದೆ. ಸಾಹಸ ನಿರ್ದೇಶಕರು ಎಷ್ಟು ತಯಾರಿ ನಡೆಸಿದರೂ ಸಾಲದು. ಎಷ್ಟೋ ಬಾರಿ ಕಲಾವಿದರು ಸಾವಿನ ಮನೆಯ ಕದ ತಟ್ಟಿ ಬಂದರೆ, ಕೆಲವು ಸಲ ಇಂತಹ ದುರಂತ ಅಂತ್ಯ ಕಾಣಬೇಕಾಗುತ್ತದೆ.

ಈಗ ಚಿತ್ರ ನಿರ್ಮಾಣದ ವೈಖರಿ ಕೂಡಾ ಸಾಕಷ್ಟು ಬದಲಾಗಿದೆ. ಪೈಪೋಟಿಯನ್ನಂತೂ ವಿವರಿಸುವ ಅಗತ್ಯವೇ ಇಲ್ಲ. ಹೀಗಿರುವಾಗ ಚಿತ್ರ ಬಾಕ್ಸಾಫೀಸ್ ಕೊಳ್ಳೆ ಹೊಡೆಯಬೇಕು, ವಿಶೇಷ ದೃಶ್ಯಗಳನ್ನು ತೋರಿಸಿ ಪ್ರೇಕ್ಷಕರನ್ನು ಸೆಳೆಯಬೇಕು ಎಂಬ ತಹತಹ ನಿರ್ಮಾಪಕ/ ನಿರ್ದೇಶಕನಿಗೆ ಇರುತ್ತದೆ. ಹೀಗಾಗೇ ಯಾವ್ಯಾವುದೋ ಹೊಸ ಸಾಹಸ, ಹೊಸ ಮಾದರಿಗೆ ಕೈ ಹಾಕುತ್ತಿದ್ದಾರೆ. ಹಾಲಿವುಡ್ ಮಾದರಿಯನ್ನೂ ಚಿತ್ರಗಳಲ್ಲಿ ವೈಭವೀಕರಿಸಿ ತೋರಿಸುವ ಆಸೆ ಸಹಜವೇ. ಆದರೆ ಅಲ್ಲಿರುವ ಸೂಕ್ತ ವ್ಯವಸ್ಥೆ, ಹಣಕಾಸು ಸೌಲಭ್ಯ ಇಲ್ಲಿದೆಯೇ? 'ಮಾಸ್ತಿಗುಡಿ' ಉದಾಹರಣೆಯನ್ನೇ ತೆಗೆದುಕೊಂಡರೆ ನೀರಿಗೆ ಜಿಗಿದ ಕಲಾವಿದರನ್ನು ದಡಕ್ಕೆ ಕರೆತರಲು ಸೂಕ್ತ ಬೋಟ್ ವ್ಯವಸ್ಥೆ, ನುರಿತ ಈಜುಗಾರರನ್ನು ಹೊಂದಿಸಿಕೊಳ್ಳುವುದಕ್ಕೆ ಕೂಡಾ ಚಿತ್ರತಂಡ ಮೀನಮೇಷ ಎಣಿಸಿತು ಎನ್ನುವ ಆರೋಪಗಳು ಕೇಳಿ ಬರುತ್ತಿವೆ.

ಇಂದಿನ ಡಿಜಿಟಲ್, ಗ್ರಾಫಿಕ್ಸ್, ಅನಿಮೇಶನ್ ಯುಗದಲ್ಲಿ ಜೀವದ ಹಂಗು ತೊರೆದು ಇಂತಹ ಸಾಹಸ ದೃಶ್ಯಗಳನ್ನು ತೆಗೆಯುವ ಅವಶ್ಯಕತೆ ಇದೆಯೇ? ಸೆಟ್ ಹಾಕಿಕೊಂಡು ಚಿತ್ರೀಕರಣ ನಡೆಸಬಹುದಲ್ಲ! ವೆಚ್ಚ ಸ್ವಲ್ಪ ಹೆಚ್ಚುಕಡಿಮೆಯಾದರೂ ಕಲಾವಿದರ ಜೀವಕ್ಕಿಂತ ಹೆಚ್ಚೇನಲ್ಲ. ಸಿನಿಮಾ ಎಂದರೆ ಸತ್ಯವಲ್ಲದ್ದನ್ನು ಸತ್ಯವೆಂದೇ ತೆರೆಯ ಮೇಲೆ ಬಿಂಬಿಸುವುದು, ಪ್ರೇಕ್ಷಕರನ್ನು ನಂಬಿಸುವುದು. ನಿರ್ದೇಶಕನ ಜಾಣ್ಮೆ, ತಂತ್ರಜ್ಞನ ಕೌಶಲ ಇಲ್ಲಿ ಹೆಚ್ಚು ಕೆಲಸ ಮಾಡುತ್ತದೆ. ಅದು ಬಿಟ್ಟು ಜೀವವನ್ನು ಪಣಕ್ಕಿಟ್ಟು ನಿಜವಾಗಿಯೂ ಜಿಗಿದು ಸಾವಿನ ಆಳವನ್ನು ಮುಟ್ಟುವುದರಿಂದ ಸಿನಿಮಾ ತೆಗೆದಂತಾಗುತ್ತದೆಯೇ?

ಸಿನಿಮಾ ರಂಗದಲ್ಲಿ ಕಲಾವಿದರನ್ನು ನಡೆಸಿಕೊಳ್ಳುವಾಗ ನಾಯಕ– ನಾಯಕಿಯರಿಗೊಂದು ಬಗೆ, ಉಳಿದ ಸಹನಟ/ ನಟಿಯರಿಗೆ ಇನ್ನೊಂದು ಬಗೆ ಎಂಬ ಆರೋಪಗಳು ಲಾಗಾಯ್ತಿನಿಂದಲೂ ಇದೆ. ನಾಯಕ– ನಾಯಕಿಯರ ಸುರಕ್ಷತೆಗೆ ತೆಗೆದುಕೊಳ್ಳುವ ಕಾಳಜಿ, ಅವರಿಗೆ ಚಿತ್ರೀಕರಣದ ಸಂದರ್ಭದಲ್ಲಿ ಒದಗಿಸುವ ಸವಲತ್ತುಗಳು ಸ್ಟಂಟ್ ಕಲಾವಿದರು ಸೇರಿದಂತೆ ಉಳಿದವರಿಗೆ ಇಲ್ಲ ಎಂಬುದಂತೂ ಹೌದು. ಸಾಹಸ ದೃಶ್ಯಗಳಲ್ಲಿ ಭಾಗವಹಿಸುವ ಕಲಾವಿದರಿಗೆ ವಿಮೆ ಮಾಡಿಸಲು ಅವಕಾಶವಿದ್ದರೂ ಆ ಬಗ್ಗೆ ಯಾರೂ ಆಲೋಚನೆ ಮಾಡುತ್ತಿಲ್ಲ. ಹೆಚ್ಚಿನ ಸಂದರ್ಭದಲ್ಲಿ ವಿಮಾ ಕಂಪೆನಿಗಳೂ ಸ್ಟಂಟ್ ಕಲಾವಿದರಿಗೆ ವಿಮೆ ನೀಡಲು ಮುಂದೆ ಬರುತ್ತಿಲ್ಲ ಎಂಬುದು ಹಲವರ ಅಳಲು.

ಕಲಾವಿದರೂ ಅಷ್ಟೆ. ಹೆಸರು ಮಾಡಬೇಕು, ಅವಕಾಶಗಳ ಬಾಗಿಲು ತೆರೆಯಬಹುದು ಎಂಬ ನಿರೀಕ್ಷೆಯಲ್ಲಿ ಇಂತಹ ಹುಚ್ಚು ಸಾಹಸಗಳಿಗೆ ಕೈ ಹಾಕದಿರುವುದು ಒಳಿತು. ಇಂತಹ ದೃಶ್ಯಗಳಲ್ಲಿ ನಟಿಸುವ ಅವಶ್ಯಕತೆ ಇದೆಯೇ, ಸರಿಯಾದ ಸುರಕ್ಷತಾ ಕ್ರಮಗಳನ್ನು ಕೈಗೊಂಡಿದ್ದಾರೆಯೇ ಎಂದು ಮಾಹಿತಿ ಪಡೆದುಕೊಂಡ ನಿರ್ಧಾರ ಕೈಗೊಳ್ಳಬೇಕು.

ಒಟ್ಟಿನಲ್ಲಿ ಒಂದು ಹೊಣೆಗೇಡಿ ನಿರ್ಧಾರದಿಂದ ಇಡೀ ಚಿತ್ರರಂಗವೇ ತಲೆತಗ್ಗಿಸುವಂತಹ ದುರಂತ ಘಟನೆ ನಡೆದುಹೋಗಿದೆ. ಇನ್ನಾದರೂ ಚಿತ್ರರಂಗದವರು ಚರ್ಚಿಸಿ ಕಲಾವಿದರ ರಕ್ಷಣೆಗೆ ಕಠಿಣ ನಿಲುವು ತಳೆಯಬೇಕಾಗಿದೆ.

■ **ಸುಧಾ ಹೆಗಡೆ**



ಈಶ್ವರ್